487

ನೋಟೀಸು.

ನೆಲ್ಲ್ಯಾಳದ ಅರಮನೆ.

ತಾರೀಖು 1ನೆ ಸೆಪ್ಟೆಂಬರ್ 1907.

ನೀಲಗಿರಿ ಜಿಲ್ಲಾ ಗೂಡಲೂರ ತಾಲ್ಲೂಕು ನೆಲ್ಲ್ಯಾಳಂ ಎನ್ಪೀಟೆ ಅರಸಿನವರ ಬಾಬತು ಮೈಸೂರ ಡಿಸ್ಟ್ರಿಕ್ಟು ಗುಂಡ್ಲುಪೇಟೆ ತಾಲ್ಲೂಕು ಹಂಗಳದ ಕಸಬಾದಲ್ಲಿ ಪೂರ್ವಕ್ಕೆ ದಾರಿ, ದಕ್ಷಿಣಕ್ಕೆ ವರದರಾಜಸ್ವಾಮಿ ದೇವಸ್ಥಾನದ ಬೃಂದಾವನ, ಪಶ್ಚಿಮಕ್ಕೆ ಅಕ್ಕಸಾಲೆ ಗುರುಬಸವೈಯ್ಯನ ಮನೆ ಮತ್ತೂ ಖಾಲೀಜಾಗಾ, ಉತ್ತರಕ್ಕೆ ಗುರುಬಸವೈಯ್ಯನ ಮನೆಗೆ ಹೋಗುವ ದಾರಿ, ಈ ಮಧ್ಯೆ ಇರುವ 67ನೆ ನಂಬರು ಹೆಂಚಿನ ಮನೆಯನ್ನು ಸದರಿ ಅರಸಿನವರ ಏಜಂಟರಾಗಿದ್ದ ಮೈಸೂರ ಜಪದಕಟ್ಟೆ ಮಠದ ಲೇಟ್ ಗುರು ಪಾದ ಸ್ವಾಮಿಗಳ ಮೂಲಕ ವಾಸಮಾಡಲು ಲೇಟ್ ಹುಚ್ಚ ವೀರಕೆಟ್ಟಯ್ಯ ಪಡೆದು, ವಾಸಮಾಡುತ್ತಿದ್ದು ಮೃತನಾದುದರಿಂದ, ಈ ಚೆಗೆ ಈತನ ಹಮ್ಮ ನಾಗಕೆಟ್ಟಿ ಮತ್ತು ಮಕ್ಕಳಾದ ವೀರಭದ್ರಕೆಟ್ಟಿ ಮತ್ತು ಚನ್ನಬಸವಕೆಟ್ಟಿ ಸಹ ಇತರರ ದುರ್ಬೋಧನೆಯಿಂದ ಸದರಿ ಮನೆಯನ್ನು ಕ್ರಯ ವಗೈರೆ ಮಾಡಲು ಉದ್ಯುಕ್ತರಾಗಿರುವುದಾಗಿ ತಿಳಿಯುಬರುವುದರಿಂದ, ಯಾವ ಹಕ್ಕೂ ಭಾಧ್ಯತೆಯೂ ಇಲ್ಲದ ಹುಚ್ಚ ವೀರಕೆಟ್ಟಯ ವಾರಸುದಾರರಿಂದ ಯಾರೂ ತೆಗೆದುಕೊಳ್ಳಕೂಡದೆಂತಲೂ, ಹಾಗೂ ಪಡೆದವರಿಗೆ ಈ ಮನೆಯು ಸಿದ್ಧಿ ಸಲಾರದೆಂತಲೂ ಈ ಮೂಲಕ ಎಲ್ಲರಿಗೂ ಎಚ್ಚರಿಸಿದೆ.

(By order)
SUBBA RAO,
Agent.

ಮೈಸೂರ ಗೆಜೆಟ್ ಚಂದಾದಾರರು ವಗೈರೆ.

ಮೈಸೂರ ಗೆಜೆಟ್ ಬೆಂಗಳೂರಲ್ಲಿ ಛಾಪಿಸಲ್ಪಡುತ್ತ, ಮತ್ತು ಸದರೀ ಗೆಜೆಟ್ಟಿನಲ್ಲಿ ಛಾಪಿಸಲು ಉದ್ದೇಶಿಸಲ್ಪಟ್ಟ ತಮಾಂ ನೋಟೀಸು ಮೊಂತಾದವುಗಳೂ ಬೆಂಗಳೂರಲ್ಲಿರುವ ಮೈಸೂರ ಗೆಜೆಟ್ ಕಂಪೈಲರವರ ಹೆಸರಿಗೆ ವಿಳಾಸ ಬರೆಯಲ್ಪಟ್ಟು ರವಾನಿಸಲ್ಪಡತಕ್ಕದ್ದು.

	ಚಂದಾ.	ಟಪ್ಪಾಲ್ ಹಾಸಲ್ ಮೈಸೂರು ಸೀಮೆ ಶಿವಾಯಿ ಇತರ ಸ್ಥಳಗಳಿಗೆ.
	ರೂ. ಆ.	ರೂ. ಆ.
ಇಂಗ್ಲಿಷ್ ಅಥವಾ ಕನ್ನಡ ಕಾಪಿ 1ಕ್ಕೆ 12 ತಿಂಗಳಿಗೆ	3 8	1 12
ಇಂಗ್ಲಿಷ್ ಮತ್ತು ಕನ್ನಡ ಸುದಾ 12 ತಿಂಗಳಿಗೆ	7 0	3 8
ಚಷ್ ಮಾಹೇ ಯಾ ಕ್ವಾರ್ಟರಿಗೆ		ದಾಮೂಷಾಯಿ ಪ್ರಕಾರ ದರಗಳು
		ರೂ. ಆ.
ಚಾಲ್ತಿ ವರುಷದ ಗೆಜೆಟ್ ಕಾಪಿ 1ಕ್ಕೆ ರೆಗ್ಯುಲೇರ್ಷ ಯಾ ಆಕ್ಟ್ಟುಗಳು ಯಾವದೂ ಇಲ್ಲದಿದ್ದರೆ.		0 8

ಹಿಂದಿನ ವರುಷದ ಗೆಜೆಟ್ ಕಾಪಿಗಳಿಗೆ ಚಾರ್ಜು ಕೇಳಿ ತಿಳಿದುಕೊಳ್ಳಬಹುದು.

1891ನೆ ಇಸವಿ ಜಾಬ್ತೆ 2ನೆ ಮಲ್ಕುಂ 155ನೆ ನಂಬರ್ ಉಳ್ಳ ಗವರ್ಮೆಂಟ್ ಇಸ್ತಿಹಾರ್‌ನಾಮೆ ಅನುಸರಿಸಿ ಕನ್ನಡ ಗೆಜೆಟ್ ಮೈಸೂರು ಸೀಮೆಯಲ್ಲಿನ ಪಟೇಲ್ ಶಾನುಭೋಗರುಗಳಿಗೆ ಅರ್ಧ ದರಕ್ಕೆ ಕೊಡಲ್ಪಡುವದು; ಆದರೆ ಅಂಥಾ ಪಟೇಲ್, ಶಾನುಭೋಗರುಗಳು ಆ ಕಾಲದಲ್ಲಿ ವಾಸ್ತವ್ಯವಾಗಿ ಪಟೇಲಿ ಯಾ ಶಾನುಭವಿಕೆ ಕೆಲಸ ನೋಡುತಲಿದಾರೆಂಬದಾಗಿ ಆಯಾ ತಾಲ್ಲೂಕು ಅಮಲದಾರರಿಂದ ಬಂದು ಸರಟಿಫಿಕೇಟನ್ನ ಪಡೆದು ಹಾಜರ್ಮಾಡಬೇಕಾಗಿರುತ್ತೆ.

1895ನೆ ಇಸವಿ ಜೂನ್ 21ನೆ ಮಲ್ಕುಂ 24205—6—ಜಿ. 6200ನೆ ನಂಬರ್ ಗವರ್ಮೆಂಟ್ ಆರ್ಡರ್ ಅನುಸರಿಸಿ ಮೆಲ್ಕಂಡ ರಿಯಾಯಿತಿ ದರವು, ನಾಡ ಪಟೇಲರಿಗೂ ಲಗಾವು ಮಾಡಲ್ಪಟ್ಟಿರುತ್ತೆ.

ಸಿವಿಲ್ ಕೋರ್ಟ್‌ನಿಂದ ಕೊಡಲ್ಪಡುವ 1901ನೆ ಇಸವಿ VIIನೆ ರೆಗ್ಯುಲೇರ್ಷ ಅನುಸರಿಸಿ ಸರ್ಟಿಫಿಕೇಟ್

	ರೂ. ಆ.
ಬಗ್ಯೆ ನೋಟಿಸ್‌ಗಳು :—	
ಮೊದಲನೇ ದಫಾ ಫಾಯಿಷ್ ಮಾಡತಕ್ಕ ಬಗ್ಯೆ ಇಂಗ್ಲೀಷು ಅಥವಾ ಕನ್ನಡ ..	2 8
ಎರಡನೇ ಸಲ ವ ಆತರುವಾಯ ಪ್ರತಿ ಅವರ್ತಿಗೂ ಡಿಟೋ ..	1 4
ಸಿವಿಲ್ ಪ್ರೊಸೀಜ್ಯೂರ್ ಕೋಡಿನ 347ನೆ ಸೆಕ್ಷೆ ಅನುಸರಿಸಿ ದಿವಾಳಿ ಅಪ್ಲಿಕೇರ್ಷಗಳ ಬಗ್ಯೆ ನೋಟಿಸ್‌ಗಳಿಗೆ :—	
ಮೊದಲನೇ ಸಲಕ್ಕೆ	5 0
ಎರಡನೇ ವ ಆತರುವಾಯ ಪ್ರತಿ ದಫಾಕ್ಕೆ	2 8
ಸಿವಿಲ್ ಪ್ರೊಸೀಜ್ಯೂರ್ ಕೋಡಿನ 354ನೆ ಸೆಕ್ಷೆ ಅನುಸರಿಸಿ ಸಿವಿಲ್ ಕೋರ್ಟ್ಟುಗಳಿಂದ ಕೊಡಲ್ಪಡುವ ದಿವಾಳಿ ಹುಕುಂಗಳು ಬಗರ್ ಚಾರ್ಜ್ ಪ್ರಕಟಿಸಲ್ಪಡುತ್ತವೆ.	
ಡ್ಯೂಪ್ಲಿಕೇಟ್ ಕಾಪೀ ಪಟ್ಟೆ ವಗೈರೆ ಕೊಡುವ ಬಗ್ಯೆ ರೆವಿನ್ಯೂ ಆಫಿಸರ್‌ಗಳು ಕೊಡುವ ನೋಟಿಸ್‌ಗಳಿಗೆ :—	
ಮೊದಲನೇ ಸಲಕ್ಕೆ ಪುಟ 1ಕ್ಕೆ ..	10 0
ಎರಡನೇ ಸಲ ವ ಆತರುವಾಯ ಪ್ರತಿ ಸಲಕ್ಕೂ ,, ..	5 0
ಖಾಸಗೀ ಪ್ರಕಟನೆಗಳಿಗೆ ಈ ಕೆಳಗೆ ಕಾಣಿಸಲ್ಪಡುವ ದರಗಳ ಪ್ರಕಾರ ಚಾರ್ಜ್ ಮಾಡಲ್ಪಡುತ್ತೆ :—	
ಮೊದಲನೇ ದಫಾ ಇಂಗ್ಲೀಷ್ ಅಥವಾ ಕನ್ನಡಕ್ಕೆ ಪಙ್ತಿ 1ಕ್ಕೆ ..	0 8
ಎರಡನೇ ದಫಾ ಡಿಟೋ ಡಿಟೋ	0 6
ಮೂರನೇ ವ ಆತರುವಾಯ ಪ್ರತಿ ಸಲಕ್ಕೆ	0 4